ಹೆಚ್ಚುವರಿ ಜೆ.ಎಂ.ಎಫ್.ಸಿ. ನ್ಯಾಯಾಲಯದ ಮುಧೋಳ,

ಸರಕಾರ — ಸಿ.ಸಿ. ನಂ. 419/2013,

ಫಿರ್ಯಾದಿ

:: ವಿರುದ್ಧ ::

1 ಹುಸೇನ ಬೇಪಾರಿ ಉರ್ಫ್ ಜಾತಗಾರ ಉರ್ಫ್ ಬಿಜಾಪುರೆ,
ಸಾ: ಮುದ್ದೇಬಿಹಾಳ, ಹಾಗೂ 3 ಜನ ಇತರರು.

— ಆರೋಪಿತರು.

- - -

ನಾನು ಶ್ರೀ ... ಹೆಚ್ಚುವರಿ ... ,
ಬಿ.ಕಾಂ.ಎಲ್ಎಲ್‌ಬಿ(ಸ್ಪೆಷಲ್)
ಹೆಚ್ಚುವರಿ ಜೆ.ಎಂ.ಎಫ್.ಸಿ. ಮುಧೋಳ.

ದಿನಾಂಕ: 25-10-2013.

- - -

ಆರೋಪಿತರಾದ ನೀವು 1 ಹುಸೇನ ಮಲ್ಲಿಕಸಾಬ ಬೇಪಾರಿ ಉರ್ಫ್
ಜಾತಗಾರ ಉರ್ಫ್ ಬಿಜಾಪುರೆ,
ವ: 30 ವರ್ಷ, ಉ: ವ್ಯಾಪಾರ,
ಸಾ: ಮುದ್ದೇಬಿಹಾಳ, ಜಿ: ಬಿಜಾಪುರ,
2 ವಿಠ್ಠಲ ಬಾಳಪ್ಪಾ ಪಾತ್ರೋಟ,
ವ: 21, ಉ: ಕಾರ್ಮಿಕ
ಸಾ: ನಿಮಾಬಿಂತಿ, ತಾ: ಮುಧೋಳ.
3 ಇಮಾಮಸಾಬ ಗಂಡ. ಲಾಲಸಾಬ ಕಲೆಗಾರ,
ವ: 36, ಸಾ: ಮುಧೋಳ.
4 ಅಶೋಕ ಧರ್ಮಚಂದ ಓಸ್ವಾಲ್
ಸಾ: ಮುಧೋಳ.

ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಇರುತ್ತದೆ.

## ॥ ದೋಷಾರೋಪಣೆ ॥

ದಿನಾಂಕ:25-02-2013 ರಂದು ರಾತ್ರಿ 2-00 ಗಂಟೆಗೆ ಮಹಾಲಿಂಗಪುರ ಪಿ.ಎಸ್. ಹದ್ದಿ ಪೈಕಿ ಬೆಳಗಲಿ ಗ್ರಾಮದಲ್ಲಿ, ಆರೋಪಿ ನಂ: 1 ಮತ್ತು 2 ನೇದವರಾದ ಹುಸೇನ ಬೇಪಾರಿ, ಮತ್ತು ವಿಠ್ಠಲ ಪಾತ್ರೋಟ, ಆರೋಪಿತರಾದ ನೀವಿಬ್ಬರೂ ಕೂಡಿಕೊಂಡು ಹಿರೋ ಹೊಂಡಾ ಸ್ಪ್ಲೆಂಡರ ಪ್ಲಸ್ ಮೋಟಾರ ಸೈಕಲ್ ನಂ: ಕೆಎ: 22: ಇಬಿ-1596 ನೇದ್ದರ ಮೇಲೆ ಬೆಳಗಲಿಗೆ

-2-

ಪಿರ್ಯಾದಿಯ ಮನೆಯ ಮೇಲ್ಮಹಡಿಯ ಮಧ್ಯದ ರೂಮದ ಮೇಲ್ಛಾವಣಿಯ ಸಿಮೆಂಟ್ ಪತ್ರಾಸನ್ನು ಸರಿಸಿ ಮೇಲಿಂದ ರೂಮದಲ್ಲಿ ಇಳಿದು ಪಡಸಾಲಿಗೆ ಬಂದಿದ್ದು ಆ ಮೂಲಕ ಭಾ ದಂ ಸಂ ಕಲಂ-457 ರ ಮೇರೆಗೆ ಶಿಕ್ಷಾರ್ಹವಾದ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ. ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವಿಬ್ಬರೂ ಕೂಡಿ ಪಿರ್ಯಾದಿಯ ಮನೆಯ ಮೇಲ್ಮಹಡಿಯ ಮಧ್ಯದ ರೂಮದ ಮೇಲ್ಛಾವಣಿಯ ಸಿಮೆಂಟ್ ಪತ್ರಾಸನ್ನು ಸರಿಸಿ ಮೇಲಿಂದ ರೂಮದಲ್ಲಿ ಇಳಿದು ಪಡಸಾಲಿಗೆ ಬಂದು ಪಡಸಾಲಿಯಲ್ಲಿದ್ದ ಕಟ್ಟಿಗೆಯ ಕಪಾಟಿನ ಕೀಲಿಯನ್ನು ಕಬ್ಬಿಣದ ರಾಡದಿಂದ ಮುರಿದು ಅದರಲ್ಲಿದ್ದ ಟ್ರಂಕಿನ ಕೀಲಿಯನ್ನು ಸಹ ಮುರಿದು ಟ್ರಂಕಿನಲ್ಲಿದ್ದ 1 ತೊಲೆ ಬಂಗಾರದ ಚೈನ್, 1 ತೊಲೆ ಬಂಗಾರದ ಬೋರಮಲ, 1.5 ತೊಲಿ ಬಂಗಾರದ ಟಿಕಿ, ಅರ್ಧ ತೊಲೆ ಬಂಗಾರದ ಗುಳದಾಳಿ, ಅರ್ಧ ತೊಲೆ ಕಿವಿಯೋಲೆ, 1 ತೊಲೆ ಬಂಗಾರದ ಚೈನ್ ಇವುಗಳನ್ನು ಕಳ್ಳತನ ಮಾಡಿದ್ದು ಆ ಮೂಲಕ ಭಾ ದಂ ಸಂ ಕಲಂ 380 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಆರೋಪಿ ನಂಃ 3 ಮತ್ತು 4 ನೇದವರಾದ ಇಮಾಮಬು ಮತ್ತು ಅಶೋಕ ಆರೋಪಿತರಾದ ನೀವಿಬ್ಬರೂ ಕೂಡಿ ಆರೋಪಿ ನಂಃ 1 ನೇದವರಾದ ಹುಸೇನ ಬೇಪಾರಿ ಇವರು ಮೇಲೆ ಹೇಳಿದ ಕಳ್ಳತನದ ಮಾಲನ್ನು ಕೊಡಲು ಬಂದಾಗ, ಅದು ಕಳ್ಳತನದ್ದು ಅಂತಾ ಗೊತ್ತಿದ್ದು ತಿಳಿದು ತಿಳಿದು ನಿಮ್ಮ ಫಾಯ್ದೆಗೋಸ್ಕರ ಅದನ್ನು ಸ್ವೀಕರಿಸಿದ್ದು ಆ ಮೂಲಕ ಭಾ ದಂ ಸಂ ಕಲಂ 411 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲ್ಕಾಣಿಸಿದ್ದ ದೋಷಾರೋಪಣೆಗಾಗಿ ನಿಮ್ಮ ಮೇಲೆ ವಿಚಾರಣೆಯಲು ಆದೇಶಿಸುತ್ತೇನೆ.

ಪ್ರಶ್ನೆ:1: ಆಪಾದನೆ ಓದಿ ಹೇಳಿದ್ದು, ತಿಳಿಯಿತೋ ಹೇಗೆ ?

ಉತ್ತರ: 1) ತಿಳಿಯಿತು

2) ತಿಳಿಯಿತು

3) ತಿಳಿಯಿತು

4) ತಿಳಿಯಿತು.


ಪ್ರಶ್ನೆಃ ಆಪಾದನ ಒಪ್ಪಿಕೊಳ್ಳುವಿರೋ ಇಲ್ಲವೇ ವಿಚಾರಣೆಯಾಗಬೇಕೋ ?

ಉತ್ತರ: ವಿಚಾರಣೆಯಾಗಬೇಕು.

ಓ ಹೇ ಕೇ ಸರಿ ಇದೆ.

24/4/14

ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

1 ಹುಸೇನ ಮಲ್ಲಿಕಸಾಬ ಬೇಪಾರಿ ಉರ್ಫ್
ಜಾತಗಾರ ಉರ್ಫ್ ಬಿಜಾಪೂರೆ. 

2 ವಿಠ್ಠಲ ಬಾಳಪ್ಪಾ ಪತ್ರೋಟ, V.B.Patrot.

3 ಇಮಾಮಬು ಗಂಡ. ಲಾಲಸಾಬ ಕಲೆಗಾರ

4 ಅಶೋಕ ಧರ್ಮಚಂದ ಓಸ್ವಾಲ್ Oswal.